# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1224

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 30.09.2020

ಉತ್ತರಿಸುವ ಸಚಿವರು : ಕೃಷಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2020-21ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಇಲಾಖೆಗೆ ನಿಗದಿಪಡಿಸಿದ್ದ ಹಣ ಎಷ್ಟು; ಇದರಲ್ಲಿ ಕೃಷಿ ಭಾಗ್ಯ ಯೋಜನೆಗೆ ಮೀಸಲಿರಿಸಿದ್ದ ಹಣ ಎಷ್ಟು;</td><td>2020-21ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಇಲಾಖೆಗೆ ರೂ.5575.26 ಕೋಟಿ ಮತ್ತು ಜಲಾನಯನ ಅಭಿವೃದ್ದಿ ಇಲಾಖೆಗೆ ರೂ.184.8175 ಹಣ ನಿಗದಿಪಡಿಸಲಾಗಿದೆ. ಇದರಲ್ಲಿ ಕೃಷಿ ಭಾಗ್ಯಯೋಜನೆಗೆ ಮೀಸಲಿರಿಸಿದ ಹಣ ರೂ.40.00 ಕೋಟಿಗಳು</td></tr>
<tr><td>ಆ)</td><td>ಈ ಹಣದಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಹಣ ಎಷ್ಟು;</td><td>ಕೃಷಿ ಇಲಾಖೆಗೆ ಬಿಡುಗಡೆಯಾದ ಹಣದ ವಿವರ ಕೆಳಕಂಡತಿಂದೆ.<br><table><tr><th>ಇಲಾಖೆ</th><th>ಬಿಡುಗಡೆ</th><th>ಖರ್ಚು</th></tr><tr><td>ಕೃಷಿ ಇಲಾಖೆ</td><td>1414.724ಕೋಟಿ</td><td>1045.2937ಕೋಟಿ</td></tr><tr><td>ಜಲಾನಯನ ಅಭಿವೃದ್ದಿ ಇಲಾಖೆ</td><td>93.584 ಕೋಟಿ</td><td>64.967 ಕೋಟಿ</td></tr></table><br>ಕೃಷಿ ಭಾಗ್ಯ ಯೋಜನೆಗೆ ರೂ. 10.00 ಕೋಟಿ ಬಿಡುಗಡೆಯಾಗಿದ್ದು, ರೂ.8.67 ಕೋಟಿ ಖರ್ಚಾಗಿದೆ.</td></tr>
<tr><td>ಇ)</td><td>ಈ ಸಾಲಿನಲ್ಲಿ ರೈತರಿಗೆ ನೀಡಬೇಕಾದ ಎಲ್ಲಾ ಸಹಾಯಧನವನ್ನು ನಿಗದಿತ ಸಮಯದಲ್ಲಿ ವಿತರಿಸಲಾಗಿದೆಯೇ? (ವಿವರಗಳನ್ನು ನೀಡುವುದು)</td><td>ಕೃಷಿ ಇಲಾಖೆಗೆ ಬಿಡುಗಡೆಯಾದ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು, ರೈತರಿಗೆ ನೀಡಬೇಕಾದ ಸಹಾಯಧನ ವಿತರಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br>ಜಲಾನಯನ ಅಭಿವೃದ್ದಿ ಇಲಾಖೆಯಡಿ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳ ಯೋಜನಾ ಪ್ರದೇಶದಲ್ಲಿ ಜಲಾನಯನ ತತ್ವದ ಆಧಾರದ ಮೇಲೆ ರೈತರು ತಮ್ಮ ಕೃಷಿ ಹೊಂಡಗಳನ್ನು ಯೋಜನೆ ಅನುದಾನದಿಂದ ತಾವೇ ನಿರ್ಮಾಣ ಮಾಡಿಕೊಳ್ಳಲು</td></tr>
</table>

| | | |
|---|---|---|
| | | ಅವಕಾಶವಿರುತ್ತದೆ. ರೈತರು ತಾವೇ ಕೃಷಿ ಹೊಂಡ ನಿರ್ಮಾಣ ಮಾಡಿಕೊಳ್ಳಲು ಮುಂದೆ ಬಾರದ ಪಕ್ಷದಲ್ಲಿ ಜಲಾನಯನ ಸಮಿತಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು ನೇರವಾಗಿ ರೈತರಿಗೆ ಯಾವುದೇ ಸಹಾಯಧನವನ್ನು ವಿತರಿಸಲಾಗುತ್ತಿಲ್ಲ. |

ಸಂಖ್ಯೆ: AGRI-AML-199/2020

(ಬಿ.ಸಿ.ಪಾಟೀಲ್)
ಬಿ.ಸಿ. ಪಾಟೀಲ್
ಕೃಷಿ ಸಚಿವರು